ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573**

**Website: www.hims-hassan.org, Phone/Fax No.08172-231699/ 231599**

**Email: directorhims@yahoo.com**

# 9 ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

## ದಿನಾಂಕ: 22-08-2014ನೇ ಶುಕ್ರವಾರ, ಅಪರಾಹ್ನ: 12-30

:ಸ್ಥಳ:

ಕೊಠಡಿ ಸಂಖ್ಯೆ: 105, 1ನೇ ಮಹಡಿ,

ವಿಕಾಸ ಸೌಧ, ಬೆಂಗಳೂರು.

ಶಾಲಾಶಾಲಾ

ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

**SRI CHAMARAJENDRA HOSPITAL CAMPUS, HASSAN-573201**

Website: www.hims-hassan.org Phone/Fax No.08172-231699 /231599

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 9ನೇ ಆರ್ಥಿಕ ಸಮಿತಿ ಸಭೆಯನ್ನು ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:22–08–2014 ರಂದು ಶುಕ್ರವಾರ ಅಪರಾಹ್ನ 12–30 ಗಂಟೆಗೆ ಕೊಠಡಿ ಸಂಖ್ಯೆ:105, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:09** **ಹಾಜರಿದ್ದ ಸದಸ್ಯರ ಸಂಖ್ಯೆ:07**

| | | | |
|---|---|---|---|
| 01 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 03 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 04 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | – |
| 05 | ಮಾನ್ಯ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 06 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 07 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | – |
| 08 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 09 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ಸಂಸ್ಥೆಯಲ್ಲಿ ಖಾಯಂ ಬೋಧಕರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ವೇತನ ಪುನರ್ ನಿಗದಿ ಮಾಡಲಾಗಿರುತ್ತದೆ. ಇವರುಗಳು ಸೇವೆ ಸೇರಿದ ದಿನಾಂಕದಿಂದ ಬಾಕಿ ಇರುವ (Arrears) ಮೊತ್ತವನ್ನು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಬಿಡುಗಡೆ ಮಾಡುವ ಬಗ್ಗೆ. | ಸಂಸ್ಥೆಯ ಖಾಯಂ ಬೋಧಕರಾಗಿರುವ ಇವರಿಗೆ ವೇತನ ಶ್ರೇಣಿ ನೀಡುವುದರ ಬಗ್ಗೆ ಉಚ್ಚ ನ್ಯಾಯಾಲಯ, ಬೆಂಗಳೂರು ಮತ್ತು ಸರ್ಕಾರಿ ಆದೇಶದಂತೆ ವೇತನವನ್ನು ಸೇವೆಗೆ ಸೇರಿದ ದಿನಾಂಕದಿಂದ AICTE ವೇತನ ಶ್ರೇಣಿ 8000–275–13500 ರಲ್ಲಿ ವೇತನ ನಿಗದಿಪಡಿಸಿ, ಆರ್ಥಿಕ ಸೌಲಭ್ಯವನ್ನು ದಿನಾಂಕ:01.06.2011 ಮತ್ತು 01.03.2014 ರಿಂದ ಅನ್ವಯವಾಗುವಂತೆ ಪಾವತಿಸಲಾಗಿದೆ. ಆದರೆ ಈ ಕೆಳಕಂಡಂತೆ ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದವರೆಗೆ ವೇತನ ವ್ಯತ್ಯಾಸವನ್ನು ಪಾವತಿ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. |

| Sl.No | Names | Date of Joining | Arrears | | |
|---|---|---|---|---|---|
| | | | From | To | Total |
| 01 | Dr. Pvithra.P. | 05.10.2006 | 05.10.2006 | 31.05.2011 | 7,61,196-00 |
| 02 | Dr. Veena.H.C. | 01.10.2006 | 01.10.2006 | 31.05.2011 | 7,60,171-00 |
| 03 | Dr. Ravi chikkannanavar | 14.07.2006 | 14.07.2006 | 28.02.2014 | 7,56,618-00 |
| 04 | Dr. Prashanth.S. Pujar | 05.10.2006 | 05.10.2006 | 28.02.2014 | 7,34,729-00 |
| 05 | Dr.Chaithanya Krishnamurthy | 01.06.2006 | 01.06.2006 | 28.02.2014 | 5,65,554-00 |
| 06 | Dr. Sudha.V.R. | 19.08.2006 | 19.08.2006 | 28.02.2014 | 10,61,726-00 |
| 07 | Dr. Swapna | 02.04.2006 | 02.04.2006 | 28.02.2014 | 6,42,772-00 |
| 08 | Dr. Kokila | 05.06.2006 | 05.06.2006 | 31.05.2011 | 5,67,318-00 |
| 09 | Dr.Abhilasha | 11.08.2006 | 11.08.2006 | 30.06.2010 | 5,66,671-00 |
| 10 | Dr. Anjan Sriranga | 04.05.2006 | 04.05.2006 | 28.02.2014 | 5,61,764-00 |
| 11 | Dr. Sowmya.T.S. | 04.10.2006 | 04.10.2006 | 24.01.2012 | 3,97,645-00 |
| | | | **Total** | | **73,76,164-00** |

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 2 | ಈ ಸಂಸ್ಥೆಯು ನೂತನವಾಗಿ ಪ್ರಾರಂಭಗೊಂಡಾಗ ದಿನಾಂಕ:01–06–2007 ರ ಪೂರ್ವದಲ್ಲಿ ಹಿರಿಯ ಸ್ಥಾನಿಯ ವೈದ್ಯರು /ಉಪನ್ಯಾಸಕರಾಗಿ | ಈ ಕೆಳಕಂಡ ಹಿರಿಯ ಸ್ಥಾನೀಯ ವೈದ್ಯರನ್ನು AICTE ವೇತನ ಶ್ರೇಣಿ 10000–325–15200 ರಲ್ಲಿ ನೇಮಕಾತಿ ಹೊಂದಿದ್ದಾರೆ. ಸರ್ಕಾರಿ ಆದೇಶ ಸಂಖ್ಯೆ:ಆಕುಕ 207 ಎಂಎಂಸಿ 2006, ದಿನಾಂಕ:19.05.2007 ರಲ್ಲಿ ದಿನಾಂಕ:01.06.2007 ರಿಂದ ಅನ್ವಯವಾಗುವಂತೆ AICTE ವೇತನ ಶ್ರೇಣಿಯಲ್ಲಿ ನೀಡಿರುವ ಆದೇಶದಂತೆ ಹಿರಿಯ ಸ್ಥಾನೀಯ ವೈದ್ಯರಿಗೆ ವೇತನ ಶ್ರೇಣಿ ರೂ.8000–275– |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ನೇಮಕ ಹೊಂದಿದವರಿಗೆ ದಿನಾಂಕ: 01-06-2007 ರಿಂದ 31-08-2011ರ ಅವಧಿಯಲ್ಲಾದ ವೇತನ ಭತ್ಯೆ ವ್ಯತ್ಯಾಸ ಪಾವತಿ ಮಾಡುವುದರ ಬಗ್ಗೆ. | 13500 ರಲ್ಲಿ ನಿಗದಿಪಡಿಸಲಾಗಿದೆ. ಇದರಿಂದ ಇವರಿಗೆ ವೇತನ ತಾರತಮ್ಯ ಆಗಿರುವುದರಿಂದ ಸರ್ಕಾರದ ಪತ್ರ ಸಂಖ್ಯೆ:ಆಕುಕ 41 ಕೆವಿಎಂ 2012, ದಿನಾಂಕ:05.04.2012 ರಲ್ಲಿ ವೈದ್ಯರ ಮನವಿಯನ್ನು ಪರಿಶೀಲಿಸಿ ವೇತನ ಶ್ರೇಣಿ 8000-275-13500 ರಲ್ಲಿ ಈ ಹಿಂದೆ ವೇತನ ಶ್ರೇಣಿ 10000-325-15200 ರಲ್ಲಿ ಪಡೆಯುತ್ತಿದ್ದ ವೇತನವನ್ನು ಸಮಾನಾಂತರವಾಗಿ ನಿಗದಿಪಡಿಸಲಾಗಿದೆ. ಆದರೆ ದಿನಾಂಕ:01.06.2007 ರಿಂದ 31.08.2011 ರವರೆಗೆ ವೇತನ ವ್ಯತ್ಯಾಸ ಪಾವತಿಸಬೇಕಾದ ಪ್ರಸ್ತಾವನೆ ಬಗ್ಗೆ ಸವಿವರವಾಗಿ ಚರ್ಚಿತವಾಗಿ ಸದರೀ ಪ್ರಕರಣದಲ್ಲಿ ಸಂಬಂಧಪಟ್ಟ ನೌಕರರಿಗೆ ಮೂಲವೇತನ ಕಡಿತಗೊಳಿಸಿ ನಿಗದಿಪಡಿಸಿದ ಕಾರಣ ಉಂಟಾದ ವ್ಯತ್ಯಾಸವು(ನಷ್ಟವು) AICTE ವೇತನ ಶ್ರೇಣಿಯಲ್ಲಿ ನಿಗದಿಪಡಿಸಲ್ಪಟ್ಟಿರುವ ತುಟ್ಟಿ ಭತ್ಯೆ ಸಂಬಂಧ ಸರಿದೂರಿಗಿಸ್ಪಟ್ಟಿರುವುದರಿಂದ ಆರ್ಥಿಕ ನಷ್ಟದ ಪ್ರಸ್ತಾವನೆ ಉದ್ಭವವಾಗುವುದಿಲ್ಲ ಎಂದು ಅಭಿಪ್ರಾಯಪಡಲಾಯಿತು. ಈಗಾಗಲೇ ಸಂಬಂಧಿಸಿದ ಸಿಬ್ಬಂದಿಗೆ ನಿಗದಿಪಡಿಸಿರುವ ವೇತನ ಹೊರತುಪಡಿಸಿ ಬಾಕಿ ವೇತನ ಬಿಲ್ಲಿನ ಪ್ರಸ್ಥಾವನೆಯನ್ನು ಸಭೆಯಲ್ಲಿ ಚರ್ಚಿಸಿ ತಿರಸ್ಕರಿಸಲು ತೀರ್ಮಾನಿಸಲಾಗಿದೆ. ಇದರ ಬಗ್ಗೆ ಚರ್ಚಿಸಲಾಗಿ AICTE ವೇತನ ಶ್ರೇಣಿ ಮತ್ತು ಹಿಂದಿನ ವೇತನದಲ್ಲಿ ಪಡೆಯುತ್ತಿದ್ದ ತುಟ್ಟಿ ಭತ್ಯೆ ವ್ಯತ್ಯಾಸದಿಂದ ಕೂಡಿರುತ್ತದೆ. ಈಗಾಗಲೇ ಇವರಿಗೆ ನಿಗದಿಪಡಿಸಿರುವ ವೇತನ ಹೊರತುಪಡಿಸಿ ಬಾಕಿ ವೇತನ ಬಿಲ್ಲಿನ ಪ್ರಸ್ತಾವನೆಯನ್ನು ಸಭೆಯಲ್ಲಿ ಚರ್ಚಿಸಿ ತಿರಸ್ಕರಿಸಲು ತೀರ್ಮಾನಿಸಲಾಗಿದೆ. |

| ಕ್ರ ಸಂ. | ಬೋಧಕರ ಹೆಸರು | ಪದನಾಮ | ಬಾಕಿ ವೇತನ ಪಾವತಿಸಬೇಕಾದ ಅವಧಿ | ಪಾವತಿಸ ಬೇಕಾಗಿರುವ ಮೊತ್ತ |
|---|---|---|---|---|
| 01 | ಡಾ. ರಾಮ್‌ನಾಥ್.ಜಿ.ಪಿ. | ಹಿ.ಸ್ಥಾ.ವೈದ್ಯರು | 01.06.2007 ರಿಂದ 31.08.2011 | 2,81,947-00 |
| 02 | ಡಾ. ಬೇಲೂರೇಗೌಡ | ಹಿ.ಸ್ಥಾ.ವೈದ್ಯರು | 01.06.2007 ರಿಂದ 31.08.2011 | 2,81,947-00 |
| 03 | ಡಾ. ಪೂರ್ಣಚಂದ್ರ.ಆರ್. | ಹಿ.ಸ್ಥಾ.ವೈದ್ಯರು | 31.08.2011 ರಿಂದ 31.08.2011 | 2,81,943-00 |
| 04 | ಡಾ.ಕಿರಣ್.ಎಸ್.ಸಿ. | ಹಿ.ಸ್ಥಾ.ವೈದ್ಯರು | 01.06.2007 ರಿಂದ 31.08.2011 | 2,81,943-00 |
| 05 | ಡಾ. ಮನೋಹರ್.ಎಸ್.ಆರ್. | ಹಿ.ಸ್ಥಾ.ವೈದ್ಯರು | 31.08.2011 ರಿಂದ 31.08.2011 | 2,81,943-00 |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | | |
|---|---|---|---|---|
| 06 | ಡಾ.ಮನುಪ್ರಸಾದ್.ಪಿ.ಆರ್. | ಹಿ.ಸ್ಥಾ.ವೈದ್ಯರು | 01.06.2007 | 2,81,947–00 |
| 07 | ಡಾ.ವಿನಯ್.ಕೆ.ಎನ್. | ಉಪನ್ಯಾಸಕರು | ರಿಂದ 31.08.2011 | 2,81,024–00 |
| 08 | ಡಾ.ವಿನಯ್ ಕುಮಾರ್.ಎಂ.ವಿ. | ಉಪನ್ಯಾಸಕರು | 01.06.2007 ರಿಂದ 31.08.2011 | 2,80,968–00 |
| | | ಒಟ್ಟು ಮೊತ್ತ | | **22,53,662–00** |

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 3 | ಅ) ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಯುಜಿ ಮತ್ತು ಪಿಜಿ ಪುಸ್ತಕಗಳನ್ನು ಇ–ಟೆಂಡರ್ ಮೂಲಕ ಖರೀದಿಸುವ ಬಗ್ಗೆ.<br>ಆ) ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳನ್ನು GOC ಮೂಲಕ ಖರೀದಿಸಲು ಅನುಮತಿ ಬಗ್ಗೆ.<br>(Good Office Committee) | ಈ ಸಂಸ್ಥೆಯ 2014–15ನೇ ಸಾಲಿನಲ್ಲಿ Dermatology, Ophthalmology, Physiology, Pharmacology, Community Medicine, Microbiology ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲಾಗಿದೆ. ಈ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಾಗೂ ಶೀರ್ಷಿಕೆ ಬದಲಾವಣೆಯಾಗಿರುವ ಪುಸ್ತಗಳನ್ನು ಖರೀದಿಸಬೇಕಾಗಿರುತ್ತದೆ. ಇವುಗಳಿಗೆ ಅಂದಾಜು ರೂ.30.00 ಲಕ್ಷಗಳು ಬೇಕಾಗಿರುತ್ತದೆ. 2014–15ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದೆ. ಈ ಅನುದಾನದಲ್ಲಿ ಖರೀದಿಸುವುದರ ಬಗ್ಗೆ ಚರ್ಚಿಸಿ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಯುಜಿ ಮತ್ತು ಪಿಜಿ ಪುಸ್ತಕಗಳನ್ನು ಇ–ಟೆಂಡರ್ ಮೂಲಕ ಖರೀದಿಸಲು ಹಾಗೂ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳನ್ನು ಜಿ.ಓ.ಸಿ. ಮೂಲಕ ಖರೀದಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 4 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡಗಳ ಆಸ್ತಿ ತೆರಿಗೆಯನ್ನು ಪಾವತಿಸುವ ಬಗ್ಗೆ | 2005–06 ರಿಂದ 2013–14ರ ಅವಧಿಯ ಸಂಸ್ಥೆಯ ಆವರಣದಲ್ಲಿರುವ ನರ್ಸಿಂಗ್‌ನವರ (ನಕ್ಷತ್ರ ಮಾದರಿ ವಸತಿಗೃಹದ) ಮತ್ತು ವೈದ್ಯಕೀಯ ವಸತಿಗೃಹದ ಕಟ್ಟಡ ತೆರಿಗೆ ಬಾಬ್ತು ಪೂರ್ಣ ಮೊತ್ತ ಒಟ್ಟು ರೂ.13,16,369.00ನ್ನು (ಧನಾದೇಶ ಸಂಖ್ಯೆ: 0299513/28–06–2014)ರಲ್ಲಿ ಆಯುಕ್ತರು, ನಗರಸಭೆಯ, ಹಾಸನರವರಿಗೆ ಪಾವತಿಸಿರುವುದನ್ನು ಅನುಮೋದಿಸಲಾಯಿತು. |
| 5 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಬರುವ ಕಟ್ಟಡಗಳಿಗೆ ನೀರು ಸರಬರಾಜಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸುವ ಬಗ್ಗೆ. | ಸದರೀ ಸಂಸ್ಥೆಗೆ ಸೇರಿದ ನರ್ಸಿಂಗ್ ವಸತಿಗೃಹ ಮತ್ತು ವೈದ್ಯಕೀಯ ವಸತಿಗೃಹದ ನೀರಿನ ತೆರಿಗೆ ಬಾಬ್ತು ಗೃಹೋಪಯೋಗಿ ಬಳಕೆ ದರದಲ್ಲಿ ಅಂದರೆ ರೂ.26=00 ಕಿ.ಲೋ ಲೀಟರ್‌ನಂತೆ (01–7–2008 ರಿಂದ 31–03–2014ರವರೆಗೆ ಪಾವತಿಸಬೇಕಾದ ಮೊತ್ತ ಒಟ್ಟು ರೂ. 1,36,82,500=00 ಸದರಿ ಮೊತ್ತವನ್ನು 04 ಸಮ ಕಂತುಗಳಲ್ಲಿ ಪಾವತಿಸಲು ನಗರಸಭೆಯಿಂದ ಅವಕಾಶ ಕೋರಲಾಗಿದ್ದು, ಪ್ರಥಮ ಕಂತಾಗಿ ರೂ.36,86,631=00ರನ್ನು ದಿನಾಂಕ: 28–06–2014ರಲ್ಲಿ ಪಾವತಿಸಲಾಗುವುದನ್ನು ಒಪ್ಪಲಾಯಿತು. ಉಳಿಕೆ ಮೊತ್ತದ ಪಾವತಿ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು. |
| 6 | ಹೊರಗುತ್ತಿಗೆ ಸಂಪನ್ಮೂಲ ಏಜೆನ್ಸಿ ಮುಖಾಂತರ ತೆಗೆದುಕೊಂಡಿರುವ ಪ್ಲಂಬರ್, ಎಲೆಕ್ಟ್ರಿಷಿಯನ್ ಮತ್ತು | ಪ್ರಸ್ತಾವಿತ ಸಿಬ್ಬಂದಿಯು ಸಂಸ್ಥೆಯ ನೇರ ಸಿಬ್ಬಂದಿಯಾಗಿಲ್ಲದಿರುವ ಕಾರಣ – ಹೊರಗುತ್ತಿಗೆ ಏಜೆನ್ಸಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಾದ್ದರಿಂದ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ದರಕ್ಕೆ ಹೆಚ್ಚುವರಿಯಾಗಿ ವೇತನ ಪಾವತಿಸುವ ಪ್ರಸ್ತಾವನೆ ಕೈಬಿಡಲಾಯಿತು. |

Finance Officer
Hassan Institute of Medical Sciences
HASSAN

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
| --- | --- | --- |
| | ಡ್ರೈವರ್‌ಗಳಿಗೆ ಕಾರ್ಮಿಕ ಇಲಾಖೆಯವರು ನಿಗದಿಪಡಿಸಿರುವ ದರದ ಜೊತೆಗೆ ಹೆಚ್ಚುವರಿಯಾಗಿ ವೇತನ ಪಾವತಿಸುವ ಬಗ್ಗೆ. | |
| 7 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕ್ಯಾನ್ಸರ್ ವಿಭಾಗದ ರೇಡಿಯೋಥೆರಪಿ ಯಂತ್ರಕ್ಕೆ AMC ಮಾಡಲು M/s. Panacea Medical Technologies Bangalore ಸಲ್ಲಿಸಿರುವ ಬಿಲ್ ಬಗ್ಗೆ. | ಸದರಿ ರೇಡಿಯೋ ಥೆರಪಿ ಯಂತ್ರದ ನಿರ್ವಹಣೆಯನ್ನು ಎ.ಎಮ್.ಸಿ. ಆಧಾರದಲ್ಲಿ 22-08-2014ರಿಂದ ಜಾರಿಗೆ ಬರುವಂತೆ ತೆರಿಗೆ ಸೇರಿದಂತೆ.<br>01ನೇ ವರ್ಷದ ಎ.ಎಮ್.ಸಿ. 22-08-2014 ರಿಂದ 21-08-2015 ರೂ.3,70,788.00<br>02ನೇ ವರ್ಷದ ಎ.ಎಮ್.ಸಿ. 22-08-2015 ರಿಂದ 21-08-2016 ರೂ.4,07,867.00<br>03ನೇ ವರ್ಷದ ಎ.ಎಮ್.ಸಿ 22-08-2016 ರಿಂದ 21-08-2017 ರೂ.4,48,653.00<br>ಮೇಲ್ಕಂಡ ವಾರ್ಷಿಕ ನಿರ್ವಹಣೆ ಮೊತ್ತ ವಾರ್ಷಿಕ 02 ಸಮ ಕಂತುಗಳಲ್ಲಿ ಏಜೆನ್ಸಿಗೆ ಪಾವತಿಸಲು ಅನುಮೋದಿಸಲಾಯಿತು. |
| 8 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಾಹನ ಸಂಖ್ಯೆ:ಕೆಎ13 ಜಿ833 ವಾಹನದ ರಿಪೇರಿ ಮೊತ್ತವನ್ನು ಪಾವತಿಸಲು ಅನುಮತಿ ನೀಡುವ ಬಗ್ಗೆ. | ಸದರಿ ವಾಹನವು ದಿನಾಂಕ: 04-05-2013ರಂದು ಆಕಸ್ಮಿಕ ಅಪಘಾತವಾಗಿದ್ದು ಈ ಸಂಬಂಧಿಸಿದ ರಿಪೇರಿ ವೆಚ್ಚ ರೂ.9,3356-00 ಆಗಿದ್ದು ಈ ಬಾಬ್ತಿನಲ್ಲಿ ನಿರ್ದೇಶಕರು ಕೆ.ಜೆ.ಐ.ಡಿ. ರವರಿಂದ ವಾಹನದ ವಿಮೆ ಪರಿಹಾರ ಬಾಬ್ತು ರೂ.44,003-00 ಸಂದಾಯವಾಗಿದ್ದು ಉಳಿಕೆ ಮೊತ್ತ ರೂ.49,353=00 ಸಂಸ್ಥೆಯ ನಿಧಿಯಿಂದ ಭರಿಸಲು ಅನುಮೋದಿಸಲಾಯಿತು. |

ಆರ್ಥಿಕ ಅಧಿಕಾರಿಗಳು, 22/8/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ, ಹಿಮ್ಸ್, ಹಾಸನ.

22/08/14
ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಗೂ ಸದಸ್ಯರು, ಆರ್ಥಿಕ ಸಮಿತಿ,
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆರ್ಥಿಕ ಸಮಿತಿ, ಹಿಮ್ಸ್, ಹಾಸನ.